quickmarketreports.com Date :14-5-2016

# ಕಾಪು ದಾಸ್ತಾನಿಗಾಗಿ ಈ ವರೆಗೆ 62,178 ಟನ್ ಬೇಳೆಕಾಳು ಕೇಂದ್ರ ಸರಕಾರದಿಂದ ಸಂಗ್ರಹ

2015–16ರ ಖಾರಿಫ್ ಬೆಳೆಯ ಸೀಸನ್‌ನಿಂದ 50424.07 ಟನ್ ತೊಗರಿ ಮತ್ತು ಉದ್ದು ಹಾಗೂ ರಾಬಿ ಸೀಸನ್‌ನಿಂದ 11,754.06 ಟನ್ ಕಡ್ಲೆ ಹಾಗೂ ಮಸೂರ್ ದೇಶೀಯವಾಗಿ ಖರೀದಿಸಿ 2016–17ನೇ ಸೀಸನ್‌ಗೆ ಕಾಪು ದಾಸ್ತಾನಿಗಾಗಿ ಸಂಗ್ರಹಿಸಲಾಗಿದೆಯೆಂದು ಲೋಕಸಭೆಗೆ ಲಿಖಿತ ಉತ್ತರದಲ್ಲಿ ಆಹಾರ ಸಚಿವ ರಾಮ್ ವಿಲಾಸ್ ಪಾಸ್ವಾನ್ ತಿಳಿಸಿದರೆನ್ನಲಾಗಿದೆ.

ಹೆಚ್ಚುಳವಾಗಿ 13,500 ಟನ್ ತೊಗರಿ ಹಾಗೂ 12,500 ಟನ್ ಉದ್ದು ಆಮದು ಮಾಡಲು ಕರಾರು ಮಾಡಲಾಗಿದೆಯೆಂದು ಸಚಿವರು ಹೇಳಿದರೆನ್ನಲಾಗಿದೆ.

ಈ ವರೆಗೆ ಆಂಧ್ರಪ್ರದೇಶ, ತೆಲಂಗಾಣ, ತಮಿಳ್ನಾಡು ಮತ್ತು ರಾಜಸ್ಥಾನ ಕಾಪು ದಾಸ್ತಾನಿನಿಂದ ಬೇಳೆಕಾಳು ಹಂಚಿಕೆಗಾಗಿ ಕೇಳಿಕೊಂಡಿವೆಯೆನ್ನಲಾಗಿದೆ.

ಆಮದಾರಿಂದ ಕಸ್ಟಮ್ಸ್ ಬಾಂಡೆಡ್ ಸಂಗ್ರಹಾಲಯಗಳ ದುರುಪಯೋಗ ತಡೆಗಾಗಿ ಸರಕಾರ ನಿಗಾ ವಹಿಸಿದೆಯೆನ್ನಲಾಗಿದೆ. ಆಂತರಿಕ ಬೇಳೆಕಾಳು ವ್ಯಾಪಾರದಲ್ಲಿ ತೊಡಗಿರುವ ಹಣಪೂರೈಕೆದಾರರು, ವ್ಯಾಪಾರಿಗಳು, ಆಮದುದಾರರ ಹುಡುಕಾಟ ಹಾಗೂ ಸರ್ವೆ ನಡೆಸಲಾಗಿದೆಯೆಂದು ಸಚಿವರು ಹೇಳಿದರೆನ್ನಲಾಗಿದೆ.

2015–16ನೇ ಬೇಳೆ ವರ್ಷದಲ್ಲಿ ಭಾರತದಲ್ಲಿ ಅಂದಾಜು 17 ಮಿಲಿಯನ್ ಟನ್ ಬೇಳೆಕಾಳು ಉತ್ಪಾದನೆಯಾಗಿದ್ದು 21–22 ಮಿಲಿಯನ್ ಟನ್ ಬೇಡಿಕೆಯನ್ನು ನಿರೀಕ್ಷಿಸಲಾಗಿದ್ದು, ಕೊರತೆಯಾದ ಬೇಳೆಕಾಳು ಖಾಸಗಿ ವರ್ತಕರ ಮೂಲಕ ಆಮದು ಮಾಡಲಾಗುವುದೆನ್ನಲಾಗಿದೆ.